**ಇಂದು ದಿನಾಂಕಃ 07-08-2025 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಬಿ.ಎಸ್.ವಕೀಲರಿಂದಃ-**

ಈ ದಾವೆ ಯಾವ ಕಾರಣಕ್ಕಾಗಿ ಸಲ್ಲಿಸಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ನನ್ನ ಮಗನಾದ ಶರಣು ಮತ್ತು ನನ್ನ ತಂಗಿ ಕಪೀಲಾವತಿರವರು ಸಲ್ಲಿಸಿದ್ದಾರೆ ಎನ್ನುತ್ತಾರೆ. ಈ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಸಾಕ್ಷಿ ಮುಂದುವರೆದು ನನ್ನ ಚಿಕ್ಕಪ್ಪನಾದ ವೈಜಿನಾಥನಿಂದ ದಾವಾ ಜಮೀನನ್ನು ಖರೀದಿ ಮಾಡಿದ್ದೇನೆ ಎನ್ನುತ್ತಾರೆ. ನನ್ನ ವಿರುದ್ಧ ದಾಖಲಾದ ಇನ್ನೋಂದು ದಾವೆ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಇನ್ನೋಂದು ದಾವೆಯಲ್ಲಿ ಯಾರಿಗೆ ವಕೀಲಾಗಿ ನೇಮಿಸಿದ್ದೇನೆ ಎಂದು ನನಗೆ ಮಾಹಿತಿ ಇಲ್ಲ. ಇನ್ನೊಂದು ದಾವೆಯಲ್ಲಿ ನನಗೆ ಯಾರು ನೋಟಿಸು ಕಳುಹಿಸಿದ್ದಾರೆಂದು ನಾನು ತಿಳಿದುಕೊಂಡಿಲ್ಲ. ಸದರಿ ಇನ್ನೊಂದು ದಾವೆಯಲ್ಲಿ ನಾನು ವಕೀಲರಿಗೆ ನೇಮಿಸಿಲ್ಲ ಮತ್ತು ನನಗೆ ಅದರ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಗೌರಮ್ಮ ರವರು ಸಲ್ಲಿಸಿರುವ ದಾವೆಯಲ್ಲಿ ನಾನು ಏನು ಪ್ರತಿವಾದ ಪತ್ರ ಸಲ್ಲಿಸಿದ್ದೇನೆ ಎಂದು ನನಗೆ ಮಾಹಿತಿ ಇಲ್ಲ. ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಸಲ್ಲಿಸಿದ ದಾವೆಯಲ್ಲಿ ನನ್ನ ತಂಗಿ ಸಹಿ ಮಾಡು ಎಂದಿದಕ್ಕೆ ಸಹಿ ಮಾಡಿದ್ದೇನೆ ಮತ್ತು ಅದರ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಗೌರಮ್ಮರವರು ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 1/2021ರಲ್ಲಿ ನನ್ನ ವಿರುದ್ದ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯನ್ನು ಗೌರಮ್ಮರವರು ದಿನಾಂಕ 23-01-2021 ರಂದು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಿನಾಂಕ 07-03-2023 ರಂದು ದಾವೆ ಚಾಲ್ತಿಯಲ್ಲಿದ್ದಾಗ ನಾನು ದಾವಾ ಜಮೀನನ್ನು ಖರೀದಿ ಮಾಡಿದ ಕಾರಣ ನನಗೆ ಸದರಿ ದಾವೆಯಲ್ಲಿ ನ್ಯಾಯಾಲಯದ ಪಕ್ಷಗಾರರನ್ನಾಗಿ ಸೇರಿಸಿರುತ್ತದೆ ಎಂದರೆ ಸಾಕ್ಷಿ ದಾವಾ ಚಾಲ್ತಿ ಇರುವ ಬಗ್ಗೆ ನನಗೆ ಮಾಹಿತಿ ಇರಲಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆಗೆ ಒಟ್ಟು ಮೂರು ಜನ ಅಣ್ಣ-ತಮ್ಮಂದಿರು. ಅವರಿಗೆ ಎಷ್ಟು ಗ್ರಾಮಗಳಲ್ಲಿ ಆಸ್ತಿ ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಹೆಸರು ಶೆಂಕ್ರಪ್ಪ ಹಲಚೇರಾ ಗ್ರಾಮದಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ಚಿಕ್ಕಪ್ಪನಾದ ವೈಜಿನಾಥ ಹಲಚೇರಾ ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿ. ನನ್ನ ಇನ್ನೊಬ್ಬ ಚಿಕ್ಕಪ್ಪ ಕೊಟಗಾ ಗ್ರಾಮದಲ್ಲಿ ವಾಸವಿದ್ದರು ಮತ್ತು ಅಲ್ಲೆ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ವೈಜಿನಾಥ ರವರು ಹಲಚೇರಾ ಗ್ರಾಮದಲ್ಲಿ ಯಾವ ಕಾರಣಕ್ಕಾಗಿ ವಾಸವಿದ್ದರು ಮತ್ತು ನನ್ನ ಇನ್ನೊಬ್ಬ ಚಿಕ್ಕಪ್ಪ ಕೊಟಗಾ ಗ್ರಾಮದಲ್ಲಿ ಯಾವ ಕಾರಣಕ್ಕಾಗಿ ವಾಸವಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ತಂದೆ ಮತ್ತು ವೈಜಿನಾಥ ಹಲಚೇರಾ ಗ್ರಾಮದ ಆಸ್ತಿಗಳಲ್ಲಿ ಉಪಭೋಗ ಮಾಡುತ್ತಿದ್ದರು ಮತ್ತು ಶ್ಯಾಮರಾವ ಕೊಟಗಾ ಗ್ರಾಮದ ಆಸ್ತಿಗಳಲ್ಲಿ ಉಪಭೋಗ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

ನನ್ನ ತಂದೆ ಹಾಗೂ ಅವರ ಸಹೋದರ ಪಾಲು ಮಾಡಿಕೊಂಡು ಎಷ್ಟು ವರ್ಷ ಆಗಿದೆ ಎಂದರೆ ಸಾಕ್ಷಿ ಇನ್ನೂ ಪಾಲು ಆಗಿಲ್ಲ ಎನ್ನುತ್ತಾರೆ. ಸಾಮಾನ್ಯವಾಗಿ ಪಾಲು ಆಗದೆ ಇದ್ದಾಗ ಆಸ್ತಿಗಳಲೆಲ್ಲ ಒಟ್ಟು ಕುಟುಂಬದ ಆಸ್ತಿ ಇರುತ್ತದೆ ಎಂದರೆ ಸರಿ. ದಾವಾ ಜಮೀನನ್ನು ಖರೀದಿ ಪಡೆಯುವ ಸಮಯಕ್ಕೆ ಶ್ಯಾಮರಾವರವರ ಮಕ್ಕಳಿಗೆ ಕೇಳಿಲ್ಲ. ಶ್ಯಾಮರಾವರವರ ಮಕ್ಕಳಿಗೆ ಗೊತ್ತಿಲ್ಲದೆ ದಾವಾ ಜಮೀನು ಖರೀದಿ ಮಾಡಿದ್ದೇನೆ ಎಂದರೆ ಸರಿ.

ನನ್ನ ಅಜ್ಜನ ಹೆಸರಿನಲ್ಲಿ ಹಲಚೇರಾ ಗ್ರಾಮದಲ್ಲಿ ಎಷ್ಟು ಎಕರೆ ಜಮೀನು ಇತ್ತು ಎಂದು ನನಗೆ ಗೊತ್ತಿಲ್ಲ. ಈಗ ಹಲಚೇರಾ ಗ್ರಾಮದಲ್ಲಿ ನನ್ನ ತಂದೆಗೆ ಹಾಗೂ ನನ್ನ ಚಿಕ್ಕಪ್ಪ ವೈಜಿನಾಥರವರಿಗೆ ಎಷ್ಟು ಎಕರೆ ಜಮೀನು ಇದೆ ಎಂದ ನನಗೆ ಗೊತ್ತಿಲ್ಲ. ನನ್ನ ತಂದೆ ಶಂಕ್ರಪ್ಪ ಹಲಚೇರಾ ಗ್ರಾಮದಲ್ಲಿರುವ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನನ್ನ ತಂದೆ ಹಾಗೂ ಅವರ ಸಹೋದರರೆಲ್ಲರು ಸೇರಿ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಮಾರಾಟ ಮಾಡಿದ ಜಮೀನಿನ ಖರೀದಿ ಪತ್ರದಲ್ಲಿ ಶ್ಯಾಮರಾವರವರ ಸಹಿ ಇಲ್ಲ ಎಂದು ಪ್ರಶ್ನಿಸಿದಾಗ ಸಾಕ್ಷಿ ಅದರ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನನ್ನ ತಂದೆ ಮಾರಾಟ ಮಾಡಿದ ಜಮೀನಿನ ಸರ್ವೆ ಸಂಖ್ಯೆ ನನಗೆ ಗೊತ್ತಿಲ್ಲ.

ನನ್ನ ಚಿಕ್ಕಪ್ಪ ವೈಜಿನಾಥರವರು ಹಲಚೇರಾದಲ್ಲಿರುವ ಜಮೀನನ್ನು ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. ಹಲಚೇರಾದಲ್ಲಿ ಈಗ ನಮ್ಮ ಕುಟುಂಬಕ್ಕೆ ಸೇರಿದ ಎಷ್ಟು ಎಕರೆ ಜಮೀನು ಇದೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಅದರ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಾನು ಹಲಚೇರಾ ಗ್ರಾಮದಲ್ಲೆ ಹುಟ್ಟಿದಾಗಿನಿಂದ ವಾಸವಿದ್ದೇನೆ ಎಂದರೆ ಸರಿ. ಈಗಲೂ ಸಹ ಹಲಚೇರಾ ಗ್ರಾಮಕ್ಕೆ ಹೋಗಿ ಬರುತ್ತೇವೆ ಎಂದರೆ ಸಾಕ್ಷಿ ಯಾವುದಾದರೂ ಕಾರ್ಯಕ್ರಮ ಇದ್ದರೆ ಹೋಗಿ ಬರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ಚಿಕ್ಕಪ್ಪಂದಿರ ಮಧ್ಯೆ ವ್ಯವಹಾರ ಆಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ತಂದೆ ಹಾಗೂ ನನ್ನ ಚಿಕ್ಕಪ್ಪಂದಿರ ಮಧ್ಯೆ ಪಾಲು ಆಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ.

ನನ್ನ ತಂದೆ ಶಂಕ್ರಪ್ಪರವರು ಕನ್ನಡದಲ್ಲಿ ಸಹಿ ಮಾಡುತ್ತಿದ್ದರು ಎಂದರೆ ಸರಿ. ನನ್ನ ಚಿಕ್ಕಪ್ಪ ವೈಜಿನಾಥರವರು ಸಹ ಕನ್ನಡದಲ್ಲಿ ಸಹಿ ಮಾಡುತ್ತಾರೆ ಎಂದರೆ ಸರಿ. ದಿನಾಂಕ 26-05-1981 ರಂದು ನನ್ನ ತಂದೆ ಮತ್ತು ಅವರ ಸಹೋದರರ ಮಧ್ಯೆ ಪಾಲು ಆಗಿ ಪಾಲುಗಾರಿಕೆ ಪತ್ರ ಸಹ ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಪಾಲುಗಾರಿಕೆ ಪತ್ರ ಲಾಡ್ಲೆ ಪಟೇಲರವರು ಬರೆದಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಪಾಲುಗಾರಿಕೆ ಪತ್ರದಲ್ಲಿ ನನ್ನ ತಂದೆ, ವೈಜಿನಾಥ ಮತ್ತು ಶ್ಯಾಮರಾವರು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಪಾಲುಗಾರಿಕೆಯಲ್ಲಿ ದಾವಾ ಜಮೀನು ಶ್ಯಾಮರಾವರವರ ಪಾಲಿಗೆ ಹೋಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ

ಎಂದು ನುಡಿಯುತ್ತಾರೆ. ಚಂದನಕೇರಾ ಮತ್ತು ಕೊಟಗಾದಲ್ಲಿರುವ ಜಮೀನು ಖರಾಬು ಜಮೀನು ಇದ್ದ ಕಾರಣ ಅವುಗಳು ಶ್ಯಾಮರಾವರಿಗೆ ಹೋಗಿರುತ್ತದೆ ಮತ್ತು ಹಲಚೇರಾದಲ್ಲಿರುವ ಜಮೀನು ಫಲವತ್ತಾದ ಜಮೀನು ಇರುವ ಕಾರಣ ನನ್ನ ತಂದೆ ಹಾಗೂ ವೈಜಿನಾಥರವರಿಗೆ ಹೋಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1981 ರಿಂದ ಇಲ್ಲಿವರೆಗೆ ಪಾಲು ಆದಾಗಿನಿಂದ ದಾವಾ ಜಮೀನಿನ ಚೆಕ್ಕು ಬಂದಿ ಏನಿರುತ್ತದೆ ಎಂದು ಪ್ರಶ್ನಿಸಿದಾಗ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 44 ವರ್ಷಗಳಿಂದ ಇಲ್ಲಿಯವರೆಗೆ ದಾವಾ ಜಮೀನಿನ ಚೆಕ್ಕು ಬಂದಿ ನನಗೆ ಗೊತ್ತಿಲ್ಲ ಎಂದರೆ ಸರಿ.

ನನ್ನ ಚಿಕ್ಕಪ್ಪ ಶ್ಯಾಮರಾವ ಚಾಣಕ್ಷ್ಯನಿರಲಿಲ್ಲ ಮತ್ತು ಮುಗ್ದ ಇದ್ದ ಎಂದರೆ ಸರಿಯಲ್ಲ. ಶ್ಯಾಮರಾವ ಮುಗ್ದನಿರುವ ಕಾರಣ ತನ್ನ ಪಾಲಿಗೆ ಬಂದ ಜಮೀನುಗಳನ್ನು ತನ್ನ ಹೆಸರಿಗೆ ವರ್ಗಾವಣೆ ಮಾಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 44 ವರ್ಷಗಳಿಂದ ಪ್ರತಿವಾದಿಯರು ದಾವಾ ಜಮೀನಿನಲ್ಲಿ ಉಪಭೋಗ ಮಾಡುತ್ತಿದ್ದು, ಖರೀದಿ ಮಾಡುವ ಸಮಯಕ್ಕೆ ನೀವು ವೈಜಿನಾಥರವರಿಗೆ ಅವರು ಉಪಭೋಗಮಾಡುತ್ತಿರುವ ಜಮೀನು ನೀವು ಯಾಕೆ ಮಾರಾಟ ಮಾಡುತ್ತಿದ್ದಿರಾ ಎಂದು ಕೇಳಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಕೇಳಿಲ್ಲ ಎಂದು ನುಡಿಯುತ್ತಾರೆ.

**<u>ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**